**ಸಿ.ಸಿ.ನಂಃ 16143 / 2019 ಡಿ ಡಬ್ಲೂ: 1**

**ದಿನಾಂಕಃ 12-08-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ದೂರುದಾರ ಪರ ಶ್ರೀ. ಜೆ ಜಿ ವಕೀಲರಿಂದ :**

ನಾನು ಅಗ್ರಿಕಲ್ಚರ್ ಬಿಎಸ್ಸಿ ಪದವೀಧರ. ನನಗೆ ಚೆಕ್ಕು ಯಾರಿಗಾದರೂ ಕೊಟ್ಟಲ್ಲಿ ಅದರಿಂದಾಗುವ ಬಾದ್ಯತೆಗಳು ಮತ್ತು ಪರಿಣಾಮಗಳ ಬಗ್ಗೆ ನನಗೆ ಲೌಖಿಕ ಜ್ಞಾನ ಇರುತ್ತದೆ. ನಿಪಿ 1 ಚೆಕ್ಕು ನನ್ನದೇ ಇರುತ್ತದೆ. ಅದಕ್ಕೆ ಸಂಬಂಧಿಸಿದ ಬ್ಯಾಂಕಿ ಖಾತೆಯಲ್ಲಿ ನಾನು ಈಗಲೂ ಕೂಡಾ ನಾನು ವ್ಯವಹಾರವನ್ನು ಮಾಡುತ್ತಿದ್ದೇನೆ. ಅಲ್ಲದೇ ಸದರಿ ಬ್ಯಾಂಕ್ ಖಾತೆಯ ಮುಖಾಂತರ UPI ವ್ಯವಹಾರವನ್ನು ಕೂಡಾ ಮಾಡುತ್ತಿದ್ದೇನೆ. ನಿಪಿ 1 (ಎ) ನನ್ನದೇ ಇರುತ್ತದೆ ಸಾಕ್ಷಿಯು ಸ್ವತಃ ಉಳಿದ ಬರವಣಿಗೆಗಳು ನನ್ನದಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ 1 ರಲ್ಲಿ ಕಂಡರುಬರುವ ಬರವಣಿಗೆಗೂ ಮತ್ತು ನನ್ನ ಸಹಿಗೂ ವ್ಯತ್ಯಾಸ ಇರುತ್ತದೆ. ಬ್ಯಾಂಕಿಗೆ ಸಂಬಂಧಿಸಿದಂತಹ ಎಲ್ಲಾ ವ್ಯವಹಾರಗಳು ಬಗ್ಗೆ ನನ್ನ ಮೊಬೈಲ್ ಗೆ ಮೇಸೆಜ್ ಮುಖಾಂತರ ನನ್ನ ಗಮನಕ್ಕೆ ಬರುತ್ತದೆ. ನಿಪಿ 1 ಚೆಕ್ಕನ್ನು ಪಿರ್ಯಾದಿಯು ನಗದೀಕರಣಕ್ಕೆ ಹಾಜರುಪಡಿಸಿದಾಗ ನನ್ನ ಬ್ಯಾಂಕಿನಿಂದ ಈ ಬಗ್ಗೆ ಯಾವುದೇ ಮೇಸೆಜ್ ನನಗೆ ತಲುಪಿರುವುದಿಲ್ಲ. ಈ ವಿವಾತದಿ ಚೆಕ್ಕು ಅಲ್ಲದೇ ಬೇರೆ ಯಾವುದೇ

ಚೆಕ್ಕುಗಳು ಕೂಡಾ ಹಾಜರುಪಡಿಸಿದ ಬಗ್ಗೆ ನನಗೆ ಮಾಹಿತಿ ಮೇಸೆಜ್ ಮುಖಾಂತರ ಬಂದಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ನ್ಯಾಯಾಲಯದಿಂದ ನೀಡಿದ ಸಮನ್ಸ ಸಂದರ್ಭದಲ್ಲಿ ಚೆಕ್ಕನ್ನು ಪಿರ್ಯಾದಿಯು ಹಾಜರುಪಡಿಸಿದ ಬಗ್ಗೆ ಮೊದಲ ಬಾರಿಗೆ ಗೊತ್ತಾಯಿತು.

ಪಿರ್ಯಾದಿಯು ನನಗೆ ದಿಃ 06.05.2019 ರಂದು ನೀಡಿದಂತಹ ನೋಟಿಸ್ ನನಗೆ ಜಾರಿ ಆಗಿರುತ್ತದೆ. ಪಿರ್ಯಾದಿ ವಿರುದ್ದ ನಾನು ನನ್ನ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಪೊಲೀಸರಿಗೆ ಆಗಲಿ ಅಥವಾ ಕಾನೂನಾತ್ಮಕವಾಗಿ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಅಲ್ಲದೇ ಪಿರ್ಯಾದಿ ವಿರುದ್ದ ಪೋಲಿಸರಿಗೆ ದೂರು ಕೊಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಪಿರ್ಯಾದಿಗೆ ನಾನು ಹಣ ಕೊಡಲು ಬಾದ್ಯಸ್ಥನಿದ್ದ ಕಾರಣ ನಾನು ಆತನ ವಿರುದ್ದ ಯಾವುದೇ ದೂರನ್ನು ಕೊಟ್ಟಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ನನ್ನ ಪ್ರತ್ಯುತ್ತರ ನಿಪಿ 5 ರಲ್ಲಿ ಏನೆಲ್ಲಾ  ಅಂಶಗಳನ್ನು ಬರೆದಿದ್ದಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುತ್ತದೆ.

ನನ್ನ ಚೆಕ್ಕು ಮಿಸ್‌ಪ್ಲೇಸ್ ಆಗಿದೆ ಎಂದು ನಾನು ನನ್ನ ಪ್ರತ್ಯುತ್ತರದಲ್ಲಿ ಹೇಳಿದ್ದು ಅದು ಯಾವಾಗ, ಎಲ್ಲಿ, ದಿನಾಂಕ ಬಗ್ಗೆ ನಾನು ಹೇಳಲು ಆಗುವುದಿಲ್ಲ. ಈ ಬಗ್ಗೆ ನನ್ನ ಬ್ಯಾಂಕಿಗೆ ನಾನು ಯಾವುದೇ ಮನವಿಯನ್ನು ಕೊಟ್ಟಿರುವುದಿಲ್ಲ ಹಾಗೂ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ವಿವಾದಿತ ಚೆಕ್ಕನ್ನು ಶ್ರೀಕಾಂತ್ ಎಂಬುವವರಿಗೆ ಕೊಟ್ಟಿದ್ದೇನೆ ಎಂದು ಹೇಳಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಮೊದಲು ಮಿಸ್‌ಪ್ಲೇಸ್ ಆಗಿತ್ತು ಎಂದು ಹೇಳಿದ್ದೆ ಆದರೆ ಕೌಂಟರ್ ಫೈಲನ್ನು ನೋಡಿದ ನಂತರ ವಿವಾದಿತ ಚೆಕ್ಕನ್ನು ಶ್ರೀಕಾಂತ್ ರವರಿಗೆ ಕೊಟ್ಟಿದ್ದೇನೆ ಎಂದು ಗೊತ್ತಾಯಿತು. ವಿವಾದಿತ ಚೆಕ್ಕನ್ನು ಸದರಿ ಶ್ರೀಕಾಂತ್ ರವರಿಗೆ ಯಾವ ದಿನಾಂಕದಂದು ಕೊಟ್ಟಿದ್ದೆ ಎಂದು ನನಗೆ ನೆನಪಿರುವುದಿಲ್ಲ. ಕೌಂಟರ್ ಫೈಲನ್ನು ನೋಡಿದಾಗ ನಾನು ವಿವಾದಿತ ಚೆಕ್ಕನ್ನು ಶ್ರೀಕಾಂತ್ ಗೆ ಕೊಟ್ಟಿದ್ದೇನೆ ಎಂದು ಗೊತ್ತಾಯಿತು ಆದರೆ ಯಾವ ದಿನಾಂಕದಂದು ಸದರಿ ವಿಚಾರ ನನಗೆ ಗೊತ್ತಾಯಿತು ಎಂದು ಈಗ ನನಗೆ ಹೇಳಲು ನೆನಪಿರುವುದಿಲ್ಲ. ಸದರಿ ಶ್ರೀಕಾಂತ್ ವಿರುದ್ದ ನಾನು ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ ಸಮಯ ನೀಡಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

22 ನೇ ಅಪರ ಮು ಮ ದಂ,

ಬೆಂಗಳೂರು ನಗರ.